ಕರ್ನಾಟಕ ಗೃಹ ಮಂಡಳಿಯ ಆಸ್ತಿ ದುರ್ಬಳಕೆ

628(797), ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)

ಅ) ಕರ್ನಾಟಕ ಗೃಹ ಮಂಡಳಿಗೆ ಸೇರಿದ ಆಸ್ತಿಗಳ ದುರ್ಬಳಕೆ ಕುರಿತು ಸರ್ಕಾರದಲ್ಲಿರುವ ದಾಖಲೆಗಳ ಕುರಿತಾದ ವಿವರಗಳೇನು;

ಆ) ಗೃಹ ಮಂಡಳಿಯ ಆಸ್ತಿ ದುರ್ಬಳಕೆ ಅಕ್ರಮದಲ್ಲಿ ಎಷ್ಟು ಕೋಟಿ ಮೌಲ್ಯದ ಆಸ್ತಿ ದುರ್ಬಳಕೆಯಾಗಿದೆ; ಸರ್ಕಾರ ಗುರುತಿಸಿ ಕೈಗೊಂಡ ಕಾನೂನು ನಿಯಮಗಳ ಕುರಿತಾದ ವಿವರಗಳೇನು; (ಜಿಲ್ಲಾವಾರು ವಿವರ ಒದಗಿಸುವುದು)

ಇ) ಆಸ್ತಿ ದುರ್ಬಳಕೆಯಲ್ಲಿ ಪಾಲ್ಗೊಂಡ ಅಧಿಕಾರಿ/ಸಿಬ್ಬಂದಿ ವರ್ಗದವರ ಮೇಲೆ ಸರ್ಕಾರ ಜರುಗಿಸಿದ ಕಾನೂನು ಕ್ರಮಗಳೇನು; ಎಷ್ಟು ಜನ ಅಪಾದಿತ ಅಧಿಕಾರಿ/ಸಿಬ್ಬಂದಿ ವರ್ಗದವರ ಮೇಲೆ ಶಿಸ್ತಿನ ಕ್ರಮ ಜರುಗಿಸಲಾಗಿದೆ; ಗೃಹ ಮಂಡಳಿಯ ಆಸ್ತಿ ಸಂರಕ್ಷಣೆ ಮತ್ತು ಸದ್ಬಳಕೆಗಾಗಿ ಸರ್ಕಾರ ರೂಪಿಸಿರುವ ಕಾರ್ಯಕ್ರಮಗಳೇನು?

ಡಾ.ಎಂ.ಹೆಚ್.ಅಂಬರೀಷ್ (ವಸತಿ ಸಚಿವರು)

ಅ) ಕರ್ನಾಟಕ ಗೃಹ ಮಂಡಳಿಗೆ ಸೇರಿದ ಆಸ್ತಿಗಳ ದುರ್ಬಳಕೆ ಕುರಿತು ಸರ್ಕಾರದಲ್ಲಿ ಯಾವುದೇ ದಾಖಲೆಗಳು ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.